

ದಾರಿಯ ನಡುನಡುವೆ ತನುಮನ ತಣಿಸುವ ಝರಿತೊರೆಗಳು

ಫ್ರೋಜನ್ ಸ್ಟ್ರಾಬೆರಿಯನ್ನು ಐಸ್‌ಕ್ರೀಮ್ ಜೊತೆ ತಿಂದೆವು.

ಮರುದಿನ ನಮ್ಮ ಪಯಣ ಶುರುವಾಯಿತು. ಬೆಳಿಗ್ಗೆ ಮೊದಲು ನೋಡಲು ಹೊರಟಿದ್ದು ಪ್ರತಾಪಘಡವನ್ನು. ಇದು ಸುಮಾರು 24 ಕಿ.ಮೀ. ದೂರದಲ್ಲಿದೆ. ಬೆಳಗಿನ ಮಂಜಿನಲ್ಲಿ ಹಾದಿಯುದ್ದಕ್ಕೂ ಚಿಕ್ಕಚಿಕ್ಕ ಝರಿ ತೊರೆಗಳನ್ನು ನೋಡುತ್ತಾ ಹೋಗುವ ಖುಷಿ ಕಂಡುಕೊಂಡೆವು. 1656ರಲ್ಲಿ ಶಿವಾಜಿ ಮಹಾರಾಜರು ಕಟ್ಟಿಸಿದ ಈ ಕೋಟೆ, 1659ರಲ್ಲಿ ಅಫ್ಜಲ್ ಖಾನ್‌ನನ್ನು ಕೊಂದು ಮರಾಠರು ವಿಜಯ ಸಾಧಿಸಿದ ಸ್ಥಳವೂ ಆಯಿತು.

ಇತಿಹಾಸದೊಂದಿಗೆ, ಚೆಲುವನ್ನೂ ಬಾಚಿಟ್ಟುಕೊಂಡಿರುವ ಈ ಕೋಟೆಯ ಮೇಲೆ ನಿಂತು, ಕೆಳಗಿನಿಂದ ಧುಮುಕಿ ಬರುವ ಮೋಡಗಳನ್ನು ಕೈಯಲ್ಲಿ ಹಿಡಿದು ಕುಣಿದಾಡಬಹುದು. ಕೋಟೆ ಸುಮಾರು 3543 ಅಡಿ ಎತ್ತರದಲ್ಲಿರುವುದರಿಂದ ಸುತ್ತಮುತ್ತಲಿನ ಚೆಲುವನ್ನು ಕಣ್ತುಂಬಿಕೊಳ್ಳಬಹುದು.

ಸಂಜೆ ನಾವು ಮುಖ ಮಾಡಿದ್ದು ಎಲಿಫೆಂಟ್ ಹೆಡ್ ವ್ಯೂ ಪಾಯಿಂಟ್ ಕಡೆಗೆ. ಇಲ್ಲಿ ಸುಮಾರು ಅರ್ಧ ದಿವಸ ಕಳೆಯಬಹುದು. ಆನೆ ತಲೆಯಾಕಾರದ ಗುಡ್ಡದ ವೀಕ್ಷಣೆ ಇಲ್ಲಿಂದ ಸಾಧ್ಯ. ಅದಕ್ಕೇ ಈ ಹೆಸರು ಬಂದಿದೆ. ಎತ್ತರದಿಂದ ಧುಮುಕುವ ಜಲಪಾತ, ಸುತ್ತಲಿನ ಹಸುರು ಪರ್ವತ, ಜೊತೆಗೆ ಕಣಿವೆಯಲ್ಲಿರುವ ಕೊಯ್ನಾ ನದಿಯ ವಿಹಂಗಮ ನೋಟ... ಭೂಮಿ ಮೇಲಿನ ಸ್ವರ್ಗದಂತೆ ಕಾಣುವ ಈ ಜಾಗ, ನೋಡಲೇಬೇಕಾದ ಸ್ಥಳ. ಸಂಜೆ



ಮಂಜಿನೊಂದಿಗೆ ಮಿಳಿತವಾದ ಬೆಟ್ಟಗಳ ಸಾಲು


ಐದೂವರೆ ಸುಮಾರಿಗೆ, ನೋಡನೋಡುತ್ತಿದ್ದಂತೆ ವಾತಾವರಣ ಸಂಪೂರ್ಣ ಬದಲಾಗಿಬಿಟ್ಟಿತು. ಕಣಿವೆಯ ಕಡೆಯಿಂದ ನುಗ್ಗಿ ಬಂದ ಮೋಡ, ನಮ್ಮನ್ನೆಲ್ಲ ತೋಯಿಸಿತ್ತು. ಅಂದು ರಾತ್ರಿ ಮಹಾಬಲೇಶ್ವರದಲ್ಲಿ ಉಳಿದ ನಾವು, ಮರುದಿನ ಬೆಳಿಗ್ಗೆ ಪಂಚಗಣಿ ಕಡೆ ಹೊರಟೆವು.

ಪಂಚಗಣಿ, ಮಹಾಬಲೇಶ್ವರದಿಂದ ಕೇವಲ 20 ಕಿ.ಮೀ. ದೂರದಲ್ಲಿದೆ. ಸುಮಾರು 45 ನಿಮಿಷದ ಹಾದಿ. ಇಲ್ಲಿಯ ಜಿಯೋಗ್ರಫಿ ಮಹಾಬಲೇಶ್ವರಕ್ಕೆ ಹೋಲಿಸಿದರೆ ಬಲು ಭಿನ್ನ. ಇಲ್ಲಿ ಮುಖ್ಯವಾಗಿ ಟೇಬಲ್ ಲ್ಯಾಂಡ್, ಸಿಡ್ನಿ ಪಾಯಿಂಟ್ ಮತ್ತು ಮ್ಯಾಪ್ರೋ ಗಾರ್ಡನ್ ನೋಡಬಹುದು. ಪಂಚಗಣಿ ತಲುಪಿದವರು, ಮೊದಲು ಹೋಗಿದ್ದು ಸಿಡ್ನಿ ಪಾಯಿಂಟ್‌ಗೆ. ಮಹಾಬಲೇಶ್ವರದಲ್ಲಿ ಇಂಥ ಹಲವು ಜಾಗಗಳನ್ನು ಕಂಡಿದ್ದ ನಮಗೆ ಇದು ವಿಶೇಷ ಅನಿಸಲಿಲ್ಲ. ಪಂಚಗಣಿಯಲ್ಲಿ ತುಂಬಾ ಒಳ್ಳೆಯ ರೆಸಾರ್ಟ್‌ಗಳಿವೆ.

ಮಧ್ಯಾಹ್ನ 3ಕ್ಕೆ ಟೇಬಲ್ ಲ್ಯಾಂಡ್‌ನತ್ತ ಹೊರಟೆವು. ಕಳೆದ ಎರಡು ಮೂರು ದಿನಗಳಿಂದ ಗುಡ್ಡ ಬೆಟ್ಟಗಳನ್ನೇ ನೋಡುತ್ತಿದ್ದ ನಮಗೆ ಇದು ಬೇರೆಯದೇ ಅನುಭವ ಕೊಟ್ಟಿತು. ಇದು ಸಮುದ್ರ ಮಟ್ಟದಿಂದ ಸುಮಾರು 4500 ಅಡಿ ಎತ್ತರದ ಪ್ರಸ್ಥಭೂಮಿ. ಇಂಗ್ಲಿಷ್‌ನಲ್ಲಿ ಇಂಥ ಜಾಗಕ್ಕೆ 'ಪ್ಲಾಟ್' ಅನ್ನುತ್ತಾರೆ. ಇದು ಏಷ್ಯಾದಲ್ಲಿಯೇ ಎರಡನೆಯ ಅತಿ ದೊಡ್ಡ ಪ್ರಸ್ಥಭೂಮಿ. ಇಲ್ಲಿ ಕುದುರೆ ಅಥವಾ ಸಣ್ಣ ಬಸ್ಸುಗಳ ಮೇಲೆ ಕುಳಿತು ಪ್ರಯಾಣಿಸಬಹುದು. ಸಾಧ್ಯವಾದರೆ ನಡೆದೇ ಓಡಾಡುವುದು ಉತ್ತಮ.

ಇಲ್ಲಿ ನಿಂತು, ಬೆಟ್ಟಗುಡ್ಡಗಳ ಜೊತೆ ಕಣಿವೆ, ಜಲಪಾತಗಳ ಸುಂದರ ದೃಶ್ಯವನ್ನು ನೋಡುತ್ತಾ ನಿಂತರೆ ಸಮಯ ಸರಿಯುವುದೇ ತಿಳಿಯುವುದಿಲ್ಲ. ಪ್ರಕೃತಿಯೊಂದಿಗೆ ಒಂದಾಗಿ ಮೈಮರೆತುಬಿಡುವುದೇ ಬದುಕಿನ ಬಹುದೊಡ್ಡ ಸೋಜಿಗ ಎನ್ನುವುದು ಅತಿಶಯವೂ ಅಲ್ಲ. ಹಾಗೆ ಮೈಮರೆತಿದ್ದ ನಾವು, ಮರುದಿನ ಒಲ್ಲದ ಮನಸ್ಸಿನಿಂದ ಬೆಂಗಳೂರಿಗೆ ಹೊರಟು ನಿಂತೆವು. ಜೊತೆಗೊಂದಿಷ್ಟು ಸುಂದರ ನೆನಪುಗಳನ್ನೂ ಅಲ್ಲಿಂದ ಹೊತ್ತು ತಂದೆವು.

ಪ್ರತಿಕ್ರಿಯಿಸಿ: feedback@sudha.co.in



'ಸಿಡ್ನಿ ಪಾಯಿಂಟ್'ನಿಂದ ಕಾಣುವ ವಿಹಂಗಮ ನೋಟ